ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಖಾಸಗಿ ಅನುದಾನಿತ ಚಿತ್ರಕಲಾಶಾಲೆ /ಮಹಾವಿದ್ಯಾಲಯಗಳಿಗೆ 2017-18 ನೇ ಸಾಲಿನ ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017 ರ ಮಾಹೆಗಳ ಸಹಾಯನುದಾನವನ್ನು ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 9 ಎಂಪಿಎಸ್ 90 ದಿ:27-3-1991
(2) ಸರ್ಕಾರಿ ಆದೇಶ ಸಂಖ್ಯೆ: ಇಡಿ 36 ಎಂಪಿಎಸ್ 2009, ದಿ: 22.06.2009
(3) ಸರ್ಕಾರದ ಆದೇಶ ಇಡಿ 41 ಯುಆರ್‌ಸಿ 2014 ದಿ:10-7-2017
(4) ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ಇವರ ಟಿಪ್ಪಣಿ ಕಾಶಿಆ/1/ಆಆಶಾ/17-18 ದಿ:22-9-2017

ಪ್ರಸ್ತಾವನೆ:

ಉಲ್ಲೇಖ (1) ಮತ್ತು (2) ರ ಸರ್ಕಾರಿ ಆದೇಶಗಳಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟ್ಟಿದ್ದ ರಾಜ್ಯದ ಎಲ್ಲಾ ಕಲಾಶಾಲೆ/ ಮಹಾವಿದ್ಯಾಲಯಗಳ ಆಯವ್ಯಯ ನಿರ್ವಹಣೆ ಹಾಗೂ ಸಿಬ್ಬಂದಿ ವರ್ಗದವರ ಸೇವಾ ನಿರ್ವಹಣೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡಿಸಲಾಗಿದೆ. ಉಲ್ಲೇಖ (1)ರ ಆದೇಶದ ಸೂಚನೆಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯ 2010-2011 ನೇ ಸಾಲಿನಿಂದ ಯೋಜನೇತರ ಲೆಕ್ಕ ಶೀರ್ಷಿಕೆ [2203-ತಾಂತ್ರಿಕ ಶಿಕ್ಷಣ, 104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ,09-ಲಲಿತಕಲಾ ಮಹಾವಿದ್ಯಾಲಯಗಳು,101- ಸಹಾಯಾನುದಾನ (2203-00-104-09-101) ಅಡಿಯಲ್ಲಿ ಅನುದಾನಿತ ಕಲಾಶಾಲೆ/ ಮಹಾವಿದ್ಯಾಲಯಗಳ ಸಹಾಯನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯವನ್ನು ಒದಗಿಸಿಕೊಳ್ಳಲಾಗಿದೆ.

ಉಲ್ಲೇಖ(3) ಸರ್ಕಾರದ ಆದೇಶ ಇಡಿ 41 ಯುಆರ್‌ಸಿ 2014 ದಿ:10-7-2017 ರಲ್ಲಿ ಅನುದಾನಿತ ಚಿತ್ರಕಲಾ ಶಾಲೆಗಳ ಆಡಳಿತ ಮತ್ತು ಆರ್ಥಿಕ ನಿರ್ವಹಣೆಯನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಉಲ್ಲೇಖ(4) ರಲ್ಲಿ ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ತಮ್ಮ ಟಿಪ್ಪಣಿ ದಿ:22-9-2017 ರಲ್ಲಿ ಚಿತ್ರಕಲಾ ಶಾಲೆಗಳ ಕಡತಗಳನ್ನು ವಹಿಸಿಕೊಳ್ಳದೇ ಇರುವುದರಿಂದ ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017ರ ಮಾಹೇಗಳಿಗೆ ಸಹಾಯನುದಾನವನ್ನು ತಾಂತ್ರಿಕ ಶಿಕ್ಷಣ ಇಲಾಖೆ ಯಿಂದಲೇ ಬಿಡುಗಡೆ ಮಾಡಲು ಕೋರಿರುತ್ತಾರೆ.

ಆದುದರಿಂದ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ ಚಿತ್ರಕಲಾ ಶಾಲೆ/ ಮಹಾವಿದ್ಯಾಲಯಗಳ ಸಹಾಯನುದಾನವನ್ನು ಆಯಾ ಸಂಸ್ಥೆಗಳ ಪ್ರಾಂಶುಪಾಲರುಗಳು ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017 ರ ಮಾಹೆಗಳಿಗೆ ಸಲ್ಲಿಸಿರುವ ಕ್ಲೇಮ್ಗುಗಳನ್ನು ಸ್ಥೂಲವಾಗಿ ಪರಿಶೀಲಿಸಿ, ಕೂಲಂಕಷ ಲೆಕ್ಕ ತಪಾಸಣೆಯ ನಿಬಂಧನೆಯ ಮೇರೆಗೆ ಒಟ್ಟು ಮೊತ್ತ **ರೂ.17033671/- (ರುಪಾಯಿ ಒಂದು ಕೋಟಿ ಎಪ್ಪತ್ತು ಲಕ್ಷದ ಮುವತ್ತಮೂರು ಸಾವಿರದ ಆರುನೂರಾ ಎಪ್ಪತ್ತೊಂದು ಮಾತ್ರ)** ಗಳ ಸಹಾಯನುದಾನವನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

## ಆದೇಶ

**ಸಂಖ್ಯೆ: ಡಿಟಿಇ 42 ಜಿಆರ್‌ಟಿ(2) 2017 ಬೆಂಗಳೂರು, ದಿನಾಂಕ: 13-10-17**

ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ತಮ್ಮ ಟಿಪ್ಪಣಿ ದಿ:22-9-2017 ರಲ್ಲಿ ಚಿತ್ರಕಲಾ ಶಾಲೆಗಳ ಕಡತಗಳನ್ನು ವಹಿಸಿಕೊಳ್ಳದೇ ಇರುವುದರಿಂದ ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಿಂದ ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017ರ ಮಾಹೇಗಳಿಗೆ ಸಹಾಯನುದಾನವನ್ನು ತಾಂತ್ರಿಕ ಶಿಕ್ಷಣ ಇಲಾಖೆ ಯಿಂದಲೇ ಬಿಡುಗಡೆ ಮಾಡಲು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಖಾಸಗಿ ಅನುದಾನಿತ ಚಿತ್ರಕಲಾಶಾಲೆ / ಮಹಾವಿದ್ಯಾಲಯಗಳ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ 2017-18 ನೇ ಸಾಲಿನ ಜುಲೈ , ಆಗಸ್ಟ್ ಮತ್ತು ಸೆಪ್ಟೆಂಬರ್ 2017ರ ಮಾಹೆಗಳಿಗೆ ಸಹಾಯನುದಾನವನ್ನು ವಿತರಿಸಲು ಅನುಕೂಲವಾಗುವಂತೆ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ, ಸಂಬಂಧಪಟ್ಟ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಅನುಬಂಧದ ಕಾಲಂ(4)ರಲ್ಲಿ ಕಾಣಿಸಿರುವಂತೆ ಪ್ರತೀ ಸಂಸ್ಥೆಗೆ ಪ್ರತ್ಯೇಕವಾಗಿ ಅನ್ವಯಿಸುವಂತೆ ಒಟ್ಟಾರೆ ಮುಂಗಡ ಸಹಾಯನುದಾನ **ಒಟ್ಟು ರೂ.17033671/-(ರುಪಾಯಿ ಒಂದು ಕೋಟಿ ಎಪ್ಪತ್ತು ಲಕ್ಷದ ಮುವತ್ತಮೂರು ಸಾವಿರದ ಆರುನೂರಾ ಎಪ್ಪತ್ತೊಂದು ಮಾತ್ರ)**ಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8ರಲ್ಲಿ ಡ್ರಾ ಮಾಡಿ ವಿತರಿಸಲು ಆದೇಶಿಸಲಾಗಿದೆ.

### ಅನುಬಂಧ

| ಕ್ರ ಸಂ | ಸಂಸ್ಥೆಯ ಹೆಸರು | ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017 ರ ಮಾಹೆಗೆ ಪ್ರಿನ್ಸಿಪಾಲರು ಕ್ಲೇಮು ಮಾಡಿರುವ ಸಹಾಯನುದಾನ ಮೊತ್ತ (ರೂ.ಗಳಲ್ಲಿ) | ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್ 2017 ರ ಮಾಹೆಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಕೆನ್ ಕಲಾ ಶಾಲೆ, ಬೆಂಗಳೂರು | 259686+261246+262632 | 783564 |
| 2 | ಕಲಾ ಮಂದಿರ ಕಲಾಶಾಲೆ, ಬೆಂಗಳೂರು | 140666+140666+140666 | 421998 |
| 3 | ರವೀಂದ್ರ ಕಲಾ ನಿಕೇತನ, ತುಮಕೂರು | 401009+404686+404686 | 1210381 |
| 4 | ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್,ಮೈಸೂರು | 215535+215535+215535 | 646605 |
| 5 | ಮಹಾಲಸ ಚಿತ್ರಕಲಾ ಶಾಲೆ, ಮಂಗಳೂರು | 298598+305291+305291 | 909180 |
| 6 | ನಿರ್ಮಲಾ ಚಿತ್ರಕಲಾ ಶಾಲೆ, ಹಾಸನ | 202083+202083+202083 | 606249 |
| 7 | ಬೆನಾನ್ ಸ್ಮಿತ್ ಕಾಲೇಜ್ ಆಫ್ ಫೈನ್ ಆರ್ಟ್ಸ್, ಬೆಳಗಾವಿ | 62848+62848+62848 | 188544 |
| 8 | ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ, ವಿಜಯಪುರ | 102201+102201+102201 | 273490 |

8

| | | | |
|---|---|---|---|
| ೯ | ಶ್ರೀ ಸಿದ್ದೇಶ್ವರ ಕಲಾ ಮಂದಿರ, ವಿಜಯಪುರ | 81316+81700+81700 | 244716 |
| 10 | ಶ್ರೀ ವಿವೇಕಾನಂದ ಕಲಾಮಂದಿರ, ರಾಯಬಾಗ | 336546+336546+336546 | 1009638 |
| 11 | ಶ್ರೀ ಮುರುಘೇಂದ್ರ ಲಲಿತ ಕಲಾ ಮಂದಿರ, ಅಥಣಿ | 192859+192859+192859 | 578577 |
| 12 | ಕರ್ನಾಟಕ ಲಲಿತಕಲಾ ಮಹಾವದ್ಯಾಲಯ, ಗೋಕಾಕ್ | 329066+335566+335566 | 1000198 |
| 13 | ಮಹೇಶ ಚಿತ್ರಕಲಾ ಮಹಾವಿದ್ಯಾಲಯ, ಜಮಖಂಡಿ. | 283834+283834+283834 | 851502 |
| 14 | ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ, ಗದಗ | 473824+473824+473824 | 1421472 |
| 15 | ಭಾರತೀಯ ಕಲಾ ಕೇಂದ್ರ , ಧಾರವಾಡ | 359442+359442+363115 | 1081999 |
| 16 | ಜೆ.ಎಸ್.ಎಸ್.ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ | 297823+297823+297823 | 893469 |
| 17 | ಶ್ರೀ ವಿಜಯ ಮಹಾಂತೇಶ್ ಲಲಿತ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ. | 455413+454021+486247 | 1395681 |
| 18 | ಯೋಗೀಶ್ ಚಿತ್ರಕಲಾ ಮಹಾವಿದ್ಯಾಲಯ, ಬೀದರ್ | 248792+248792+248792 | 746376 |
| 19 | ಚಿತ್ರಕಲಾ ಮಹಾವಿದ್ಯಾಲಯ, ಹೂವಿನಹಿಪ್ಪರಗಿ | 272137+273517+273517 | 819171 |
| 20 | ವಿಜಯ ಆರ್ಟ್ ಇನ್ಸ್ಟುಟ್, ಗದಗ | 285966+285966+285966 | 857898 |
| 21 | ವಾಣಿ ಚಿತ್ರಕಲಾ ಶಾಲೆ, ಚಿಕ್ಕನಾಯಕನಹಳ್ಳಿ. | 59768+59768+59768 | 179304 |
| 22 | ದಿ ಐಡಿಯಲ್ ಫೈನ್ ಆರ್ಟ್ ಇನ್ಸಟ್ಯೂಟ್, ಕಲಬುರ್ಗಿ | 283893+286471+256763 | 827127 |
| 23 | ಟಾಗೋರ ಚಿತ್ರಕಲಾ ಮಹಾವಿದ್ಯಾಲಯ, ಕಾರವಾರ | 28844+28844+28844 | 86532 |
| | **ಒಟ್ಟು** | **17066784** | **17033671** |

ಒಟ್ಟು ರೂ.17033671/-(ರುಪಾಯಿ ಒಂದು ಕೋಟಿ ಎಪ್ಪತ್ತು ಲಕ್ಷದ ಮುವತ್ತಮೂರು ಸಾವಿರದ ಆರುನೂರಾ ಎಪ್ಪತ್ತೊಂದು ಮಾತ್ರ)

ಟಿಪ್ಪಣಿ: 1) ಕ್ರಸಂ 8 ರಲ್ಲಿನ ಸಂಸ್ಥೆಗೆ ಈಗಾಗಲೇ ಹೆಚ್ಚುವರಿ ಬಿಡುಗಡೆಯಾಗಿ ಸಂಸ್ಥೆಯಲ್ಲಿ ಉಳಿದಿರುವ ರೂ.33113/-ಗಳನ್ನು ಜುಲೈ 2017 ರ ವ್ಯತ್ಯಾಸದ ಸಹಾಯನುದಾನವನ್ನು ಭರಿಸಲು ತಿಳಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:

[1] ಮೇಲ್ಕಂಡ ಮುಂಗಡ ವೇತನಾನುದಾನ ಬಿಡುಗಡೆಯು ತಾಂತ್ರಿಕ ಶಿಕ್ಷಣ ಇಲಾಖೆ/ಕಾಲೇಜು ಶಿಕ್ಷಣ ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

[2] ಹೆಚ್ಚಿನ ಅನುದಾನವು ಕ್ಲೇಮು ಮಾಡಿರುವುದು ಮತ್ತು ಬಿಡುಗಡೆಯಾಗಿರುವುದು ಕಂಡುಬಂದಲ್ಲಿ,ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ರೀತಿಯಲ್ಲಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು.

[3] ಪ್ರಿನ್ಸಿಪಾಲರು ಸಿಬ್ಬಂದಿ ವರ್ಗದವರಿಗೆ ಸಹಾಯನುದಾನವನ್ನು ವಿತರಿಸುವ ಮುನ್ನ ಸಾರ್ವಜನಿಕ ಶಿಕ್ಷಣ ಇಲಾಖೆಯು ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

[4] ಮೇಲ್ಕಂಡ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಪೈಕಿ ನಿರ್ವಹಣ ಅನುದಾನ ಪಡೆಯದೇ ಇರುವ ಸಂಸ್ಥೆಗಳು 2016-17 ನೇ ಸಾಲಿನಲ್ಲಿ ಸಂಗ್ರಹಿಸಿರುವ ಬೋಧನ ಶುಲ್ಕದ ಶೇ.50 ರಷ್ಟನ್ನು ಖಜಾನೆಗೆ ಪಾವತಿಸಿರುವ ಚಲನ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

[5] ಈ ಆದೇಶದಲ್ಲಿ ಬಿಡುಗಡೆಗೊಂಡಿರುವ ಅನುದಾನದ ವೆಚ್ಚವನ್ನು "2203-ತಾಂತ್ರಿಕ ಶಿಕ್ಷಣ – 00-104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-09-ಲಲಿತಕಲಾ ಮಹಾವಿದ್ಯಾಲಯಗಳು [2203-00-104-0-09] ಲೆಕ್ಕಶೀರ್ಷಿಕೆಯಡಿ 2017-2018 ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

[6] ಪ್ರಪತ್ರ ಕ.ಆ.ಸಂ.-3 ಅನುಚ್ಛೇದ-24ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅನುದಾನದ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

[7] 2016-17 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು.

ಇವರಿಗೆ ಸೂಕ್ತ ಕ್ರಮಕ್ಕಾಗಿ,

1) ಪ್ರಾಚಾರ್ಯರುಗಳಿಗೆ ಅನುಬಂಧದಲ್ಲಿಯ ಚಿತ್ರಕಲಾಶಾಲೆ/ ಮಹಾವಿದ್ಯಾಲಯಗಳಿಗೆ.
2) ನಿರ್ದೇಶನಾಲಯದ ಬಿಎಲ್ಎಸ್[3]
3) ನಿರ್ದೇಶನಾಲಯದ ನಗದು ಶಾಖೆ

ಪ್ರತಿ ಮಾಹಿತಿಗಾಗಿ:

[1] ಮಹಾಲೇಖಪಾಲರು[ಎ&ಇ], ಕರ್ನಾಟಕ, ಬೆಂಗಳೂರು.
[2] ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
[3] ಲೆಕ್ಕಾಧಿಕಾರಿಗಳು[ಟಿಬಿಎಸ್], ನಿರ್ದೇಶನಾಲಯ, ಬೆಂಗಳೂರು.
[4] ಲೆಕ್ಕಾಧಿಕಾರಿಗಳು[ಬಿಲ್ಸ್], ನಿರ್ದೇಶನಾಲಯ, ಬೆಂಗಳೂರು.
[5] ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು.
[6] ನಿರ್ದೇಶನಾಲಯದ ಆರ್‌ಇಸಿ[2], ಐಎನ್ಎಸ್
[7] ಮತ್ತು [8] ಹೆಚ್ಚುವರಿ ಪ್ರತಿ [9] ಕಛೇರಿ ಪ್ರತಿ.